INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,42-49
Peer -Reviewed, Refereed Journal

# ಅಂಬೇಡ್ಕರ್ ಅವರ ಗ್ರಹಿಕೆಯ ಸಮಾಜ ಪರಿವರ್ತನೆ ಕುರಿತ ವಿಶ್ಲೇಷಣೆ

**ಡಾ.ಎಂ.ರಾಚಪ್ಪಾಜಿ.**[1]

**ಅಂ**ಬೇಡ್ಕರ್ ಅವರು ಭಾರತೀಯ ಸಮಾಜದಲ್ಲಿ "ಸಾಮಾಜಿಕ ಪರಿವರ್ತನೆಯ ಶಿಲ್ಪಿ" ಎಂಬ ಖ್ಯಾತಿಯನ್ನು ಪಡೆದವರು. ಇದು ಕೇವಲ ಗೌರವವಲ್ಲ, ಅವರು ಮಾಡಿರುವ ಶ್ರೇಷ್ಠ ಕಾರ್ಯಗಳು ಮತ್ತು ದಾರ್ಶನಿಕ, ಸಾಮಾಜಿಕ ದೃಷ್ಟಿಕೋನಕ್ಕೆ ಸಂಬಂಧಪಟ್ಟ ಮಾನ್ಯತೆಯ ಫಲವಾಗಿದೆ. ಅವರ ಜೀವನ ಮತ್ತು ಕೆಲಸವನ್ನು ಮೂರು ಪ್ರಮುಖ ಆಯಾಮಗಳಲ್ಲಿ ಗುರುತಿಸಬಹುದು. ಮೊದಲನೆಯದು; ಸಾಮಾಜಿಕ ನ್ಯಾಯ, ಎರಡನೆಯದು; ಶೋಷಿತ ವರ್ಗಗಳ ಹಕ್ಕುಗಳ ರಕ್ಷಣಾ ಚಟುವಟಿಕೆಗಳು ಮತ್ತು ಮೂರನೆಯದು; ಸಾಮಾಜಿಕ ಬೋಧನೆ ಅಥವಾ ಜಾಗೃತಿಯಾಗಿದೆ. ಅಂಬೇಡ್ಕರ್ ಅವರು ತಮ್ಮ ಬಾಲ್ಯದಿಂದಲೇ ಜಾತಿ ಆಧಾರಿತ ಹಿಂಸೆ ಮತ್ತು ಅಸ್ಪೃಶ್ಯತೆಯ ಕರಾಳಕೃತ್ಯವನ್ನು ಎದುರಿಸಿದರು. 1927ರಲ್ಲಿನ ಮಹಾಡ್ ನಗರದ ಚೌಡರ್ ಕೆರೆಯ ನೀರಿನ ಚಳವಳಿ ಮೂಲಕ ಅವರು ಬಡವರು ಮತ್ತು ಅಸ್ಪೃಶ್ಯರಿಗೆ ಸಾರ್ವಜನಿಕ ಹಕ್ಕು ಮತ್ತು ಗೌರವವನ್ನು ತರುವ ಹೋರಾಟ ನಡೆಸಿದರು. ದೇವಸ್ಥಾನ ಪ್ರವೇಶದ ಹಕ್ಕು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಮಾನತೆಗಾಗಿ ಮಾಡಿರುವ ಹೋರಾಟವಾಗಿದೆ. ಇದು ಶೋಷಿತರ ಶಕ್ತಿಕರಣ ಮತ್ತು ಸಬಲೀಕರಣಕ್ಕೆ ಅಂಬೇಡ್ಕರ್ ಅವರು ತಮ್ಮ ಜೀವನವನ್ನು ಸಮರ್ಪಿಸಿದರು. ಭಾರತೀಯ ಸಂವಿಧಾನದ ಮುಖ್ಯ ಶಿಲ್ಪಿಯಾಗಿ ಅವರು ಅನುಚ್ಛೇದ–15ರಲ್ಲಿ ಜಾತಿ–ಧರ್ಮದ ಆಧಾರದ ಮೇಲೆ ಭೇದಭಾವವನ್ನು ನಿಷೇಧವನ್ನು, ಅನುಚ್ಛೇದ–17ರಲ್ಲಿ ಅಸ್ಪೃಶ್ಯತೆಯನ್ನು ಕಾನೂನಾತ್ಮಕವಾಗಿ ನಿಷೇಧ ಮತ್ತು ಮೀಸಲು ವ್ಯವಸ್ಥೆಗಳನ್ನು ರೂಪಿಸಿದರು. ಲಿಂಗಭೇದವನ್ನು ನಿವಾರಿಸಲು ಮಹಿಳೆಯರ ಶಿಕ್ಷಣ, ಉದ್ಯೋಗ ಹಕ್ಕುಗಳ ಪರಿಪಾಲನೆ. ಶಿಕ್ಷಣವನ್ನು ಶೋಷಿತ ವರ್ಗಗ ಜಾಗೃತಿ ಮತ್ತು ಸ್ವಾಭಿಮಾನಕ್ಕೆ ಪ್ರಧಾನ ಸಾಧನವೆಂದು ಪರಿಗಣಿಸಿದರು. ಶಾಲೆ, ಕಾಲೇಜುಗಳ ಸ್ಥಾಪನೆ, ವಿದ್ಯಾರ್ಥಿ ಸಂಘಟನೆ, ಉಪನ್ಯಾಸಗಳು ಮತ್ತು ಬೋಧನೆ ಮೂಲಕ ಸಮಾಜದಲ್ಲಿ ಬದಲಾವಣೆಗೆ ಪ್ರೇರಣೆ ನೀಡಿದರು. 14ನೆಯ ಅಕ್ಟೋಬರ್ 1956ರಲ್ಲಿ ಬೌದ್ಧಧಮ್ಮಕ್ಕೆ ಪರಿವರ್ತನೆಯಾಗುವ ಮೂಲಕ ಶೋಷಿತ ವರ್ಗಗಳಿಗೆ ಹೊಸ ಗುರುತು, ಮಾನವೀಯತೆ, ಶ್ರೇಷ್ಠತೆ ಮತ್ತು ನ್ಯಾಯದ ಮಾರ್ಗವನ್ನು ಒದಗಿಸುವಂತೆ ಮಾಡಿದರು.

---

**1.ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.**

ಧಾರ್ಮಿಕ ಪರಿವರ್ತನೆಯ ಮೂಲಕ ಸಮಾಜದಲ್ಲಿ ಬದಲಾವಣೆ, ಸ್ವಾಭಿಮಾನ ಮತ್ತು ಮಾನವೀಯ ಮೌಲ್ಯಗಳ ಪ್ರಚಾರವನ್ನು ಅಂಬೇಡ್ಕರ್ ಅವರ ಕಾರ್ಯಗಳು ಮತ್ತು ತತ್ವಗಳು ಭಾರತೀಯ ಸಮಾಜದಲ್ಲಿ ಜಾತ್ಯಾತೀತತೆ, ಸಮಾನತೆ, ನ್ಯಾಯ ಮತ್ತು ಅಹಿಂಸೆ ಎಂಬ ಮೌಲ್ಯಗಳನ್ನು ಸ್ಥಾಪಿಸಲು ಸಹಾಯ ಮಾಡಿದವು. ಅವರು ನಡೆಸಿದ ಹೋರಾಟಗಳು ಇಂದಿಗೂ ಸಮಾಜದ ಬಡವರಿಗೆ ಪ್ರೇರಣೆ ಮತ್ತು ಮಾದರಿಯಾಗಿ ಉಳಿದಿರುತ್ತವೆ. ಅಂಬೇಡ್ಕರ್ "ಸಾಮಾಜಿಕ ಪರಿವರ್ತನೆಯ ಶಿಲ್ಪಿ" ಎಂಬ ಹೆಸರು ಪಡೆಯುವುದಕ್ಕೆ ಕಾರಣ ಅವರ ಜೀವನವಿಡೀ ಸಮರ್ಪಣೆ, ಶೋಷಿತ ವರ್ಗಗಳ ಹಕ್ಕುಗಳ ರಕ್ಷಣೆ, ಕಾನೂನು, ಧರ್ಮ ಮತ್ತು ಶಿಕ್ಷಣದ ಮೂಲಕ ಸಮಾಜದಲ್ಲಿ ಸ್ಥಿರ ಬದಲಾವಣೆ ತರಲು ಮಾಡಿದ ಪ್ರಯತ್ನಗಳಾಗಿವೆ.

**ಅಂಬೇಡ್ಕರ್ ಮತ್ತು ಸಾಮಾಜಿಕ ಪರಿವರ್ತನೆಯ ತತ್ವಗಳು**

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯನ್ನು ಕೇವಲ ಹೋರಾಟದಿಂದ ನಿವಾರಿಸಲು ಸಾಧ್ಯವಿಲ್ಲ. ಸಮಾಜವನ್ನು ಬದಲಾಯಿಸಲು ಕಾನೂನು, ಶಿಕ್ಷಣ ಮತ್ತು ಧಾರ್ಮಿಕ ಮೌಲ್ಯಗಳ ಸಮನ್ವಯ ಅವಶ್ಯಕವಾಗಿದೆ. ಅಂಬೇಡ್ಕರ್ ಅವರು ಭಾರತ ಸಂವಿಧಾನದ ಪ್ರಧಾನ ಶಿಲ್ಪಿಯಾಗಿ ಜಾತ್ಯಾತೀತತೆ, ಅಸ್ಪೃಶ್ಯತೆಯ ವಿರೋಧ ಮತ್ತು ಶೋಷಿತ ವರ್ಗಗಳ ಹಕ್ಕುಗಳ ರಕ್ಷಣೆಗಾಗಿ ಅನುಚ್ಛೇದಗಳನ್ನು ರಚಿಸಿದರು. ಕಾನೂನು ಪರಿವರ್ತನೆಯ ಮೂಲಕ ಸಮಾಜದಲ್ಲಿ ನ್ಯಾಯಬದ್ಧ ಸಮಾನತೆ ಪ್ರತಿಷ್ಠಾಪನೆಯಾಗುತ್ತದೆ. ಶಿಕ್ಷಣವು ಜನರಲ್ಲಿ ಜಾಗೃತಿ, ಸ್ವಾಭಿಮಾನ ಮತ್ತು ಸಮಾನತೆಯ ಅರಿವನ್ನು ಮೂಡಿಸುತ್ತದೆ. ಶಾಲೆ–ಕಾಲೇಜು ಸ್ಥಾಪನೆ, ಓದು–ಬರೆದವರ ಹಕ್ಕುಗಳ ವಿಸ್ತರಣೆ, ವಿದ್ಯಾರ್ಥಿ ಸಂಘಟನೆಗಳು ಮತ್ತು ಬೋಧನಾ ಚಟುವಟಿಕೆಗಳು. ಶಿಕ್ಷಣವೆಂದರೆ; ಶೋಷಿತ ವರ್ಗಗಳಿಗೆ ಸಮಾಜದಲ್ಲಿ ಸಮಾನ ಹಕ್ಕು ಪಡೆಯಲು ಮೂಲಭೂತ ಸಾಧನಯಾಗಿದೆ. ಬೌದ್ಧಧಮ್ಮದ ಸ್ವೀಕಾರ ಮತ್ತು ಬೋಧನೆಗಳ ಮೂಲಕ ಅಂಬೇಡ್ಕರ್ ಅವರು ಶೋಷಿತ ವರ್ಗಗಳಿಗೆ ನೈತಿಕ, ಮಾನವೀಯ, ಸಮಾನತೆಮಯ ಮೌಲ್ಯಗಳನ್ನು ಪರಿಚಯಿಸಿದರು. ಧಾರ್ಮಿಕ ಪರಿವರ್ತನೆಯ ಮೂಲಕ ಸಾಮಾಜಿಕ ಪರಿವರ್ತನಾ ನಿವಾರಣೆ, ಸ್ವಾಭಿಮಾನ ಮತ್ತು ನ್ಯಾಯದ ಅರಿವು ಆಗಿರುತ್ತದೆ.

**ಸಮಾನತೆ, ನ್ಯಾಯ ಮತ್ತು ಅಹಿಂಸೆಯು ಪರಿವರ್ತನೆಯ ಆಧಾರಗಳು**

ಅಂಬೇಡ್ಕರ್ ಅವರ ತತ್ವದಲ್ಲಿ ಸಮಾಜ ಪರಿವರ್ತನೆಗೆ ಮೂರು ನೈತಿಕ ಮೂಲಸ್ತಂಭಗಳು ಅತಿ ಮುಖ್ಯವಾಗಿವೆ. ಅವುಗಳೆಂದರೆ; ಮೊದಲನೆಯದು; ಸಮಾನತೆ, ಎರಡನೆಯದು; ನ್ಯಾಯ ಮತ್ತು ಮೂರನೆಯದು; ಅಹಿಂಸೆ. ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಹಕ್ಕು, ಶೋಷಣೆಯಿಲ್ಲದ ಜೀವನ, ಜಾತಿ, ಲಿಂಗ, ಆರ್ಥಿಕ ಸ್ಥಿತಿ, ಧರ್ಮ ಭೇದಗಳಿಲ್ಲದೆ ಸಮಾನ ಅವಕಾಶವನ್ನು ನೀಡುವುದು. ಶೋಷಿತ ವರ್ಗಗಳ ಹಕ್ಕುಗಳನ್ನು ಕಾನೂನಾತ್ಮಕವಾಗಿ ರಕ್ಷಿಸುವುದು, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ

ನ್ಯಾಯೋಪಾಯ ಕಲ್ಪನೆಯಾಗಿದೆ. ಹಿಂಸೆ, ಅನ್ಯಾಯ ಮತ್ತು ಅಧರ್ಮವನ್ನು ತೊರೆದೇ ಬದಲಾವಣೆ ಸಾಧಿಸುವುದು, ಶಾಂತ, ನ್ಯಾಯೋಚಿತ ಮಾರ್ಗದಲ್ಲಿ ಸಾಮಾಜಿಕ ಪರಿವರ್ತನೆಯಾಗಿರುತ್ತದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಕಾನೂನು, ಶಿಕ್ಷಣ ಮತ್ತು ಧಾರ್ಮಿಕ ಮೌಲ್ಯಗಳು ಪರಿವರ್ತನೆಯ ಸಾಧನವಾಗಿರುತ್ತವೆ. ಆದ್ದರಿಂದಲೇ ಸಮಾನತೆ, ನ್ಯಾಯ ಮತ್ತು ಅಹಿಂಸೆಯು ಪರಿವರ್ತನೆಯ ನೈತಿಕ ತಳಹದಿಯಾಗಿವೆ. ಈ ಅಂಶಗಳ ಸಮನ್ವಯದ ಮೂಲಕ, ಅವರು ಭಾರತೀಯ ಸಮಾಜದಲ್ಲಿ ಶೋಷಿತ ವರ್ಗಗಳ, ಅಸ್ಪೃಶ್ಯತೆಯ ನಿವಾರಣೆ ಮತ್ತು ಸಮಾನತೆಯ ಸ್ಥಾಪನೆಗೆ ಮಾರ್ಗದರ್ಶನ ನೀಡಿದರು.

**ಅಂಬೇಡ್ಕರ್ ಅವರ ಪರಿವರ್ತನೆ ಗ್ರಹಿಕೆ**

ಅಂಬೇಡ್ಕರ್ ಅವರ ತತ್ವದರ್ಶನದಲ್ಲಿ ಸಾಮಾಜಿಕ ನ್ಯಾಯವು ಬಹುಮುಖ್ಯ ಉದ್ದೇಶವಾಗಿದೆ. ಅವರು ಸಮಾಜದ ಅಸಮಾನತೆ ಮತ್ತು ಶೋಷಣೆ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದರು ಮತ್ತು ಸಮಾಜ ಪರಿವರ್ತನೆಗೆ ತಂತ್ರಗಳನ್ನು ರೂಪಿಸಿದರು. ಅವುಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಗೆ ಧರ್ಮ, ಜಾತಿ, ಲಿಂಗ, ಆರ್ಥಿಕ ಸ್ಥಾನಮಾನದ ಭೇದವಿಲ್ಲದೆ ಸಮಾನ ಹಕ್ಕುಗಳನ್ನು ನೀಡುವುದು ಮುಖ್ಯವಾಗಿತ್ತು. ಅವರು ಸ್ವತಃ ಕಂಡಂತಹ ಅಸ್ಪೃಶ್ಯತೆ, ವಂಚನೆ, ಶಿಕ್ಷಣದಲ್ಲಿ ಅಸಮಾನತೆಗಳ ತಡೆಗೆ ಕ್ರಮ ಕೈಗೊಂಡರು. ಅಂಬೇಡ್ಕರ್ ಅವರು ಅಸ್ಪೃಶ್ಯತೆಯನ್ನು ಭಾರತೀಯ ಸಮಾಜದ ತೀವ್ರ ಸಾಮಾಜಿಕ ಅಸಮಾನತೆಯ ಸಂಕೇತವೆಂದು ಗುರುತಿಸಿದರು. ಧರ್ಮ ಅಥವಾ ಜಾತಿ ಆಧಾರದ ಮೇಲೆ ನಡೆಯುವ ಹಿಂಸೆ, ಬಡತನ ಮತ್ತು ಅನ್ಯಾಯ ಸಮಾಜದಲ್ಲಿ ನಿಯಮಿತ ಸ್ಥಿತಿಯ ಕಾರಣವೆಂದು ಗುರುತಿಸಿದರು. ಶೋಷಿತ ವರ್ಗಗಳ ಸಮಾನತೆ ಮತ್ತು ಸ್ವಾಭಿಮಾನವನ್ನು ಪುನರ್ ಸ್ಥಾಪನೆಗೆ ಧಾರ್ಮಿಕ ಪರಿವರ್ತನೆಯಂತೆ ಬೌದ್ಧಧಮ್ಮವನ್ನು ಸ್ವೀಕಾರಿಸಿದರು.

ಅಸ್ಪೃಶ್ಯತೆಯ ವಿರುದ್ಧ ಮತ್ತು ಸಮಾನ ಹಕ್ಕುಗಳ ರಕ್ಷಣೆಯನ್ನು ಬಡವರು, ಅಸ್ಪೃಶ್ಯರು ಮತ್ತು ಮಹಿಳೆಯರಿಗೆ ಶಿಕ್ಷಣದ ಅವಕಾಶ, ಜಾಗೃತಿಯನ್ನು ಮೂಡಿಸಿದರು. ಬೌದ್ಧಧಮ್ಮ ಸ್ವೀಕಾರದ ಮೂಲಕ ಮಾನವೀಯತೆ ಮತ್ತು ಸಮಾನತೆಯ ಮೌಲ್ಯಗಳ ಪ್ರಚಾರವನ್ನು ಮಾಡಿದರು. ಅಂಬೇಡ್ಕರ್ ಅವರ ಪರಿವರ್ತನೆಯ ಗ್ರಹಿಕೆಯಲ್ಲಿ ಸಾಮಾಜಿಕ ನ್ಯಾಯ ಕೇಂದ್ರೀಯವಾಗಿದೆ. ಸಮಾಜದಲ್ಲಿ ಅಸಮಾನತೆ, ಶೋಷಣೆ ಮತ್ತು ಧಾರ್ಮಿಕ/ಸಾಮಾಜಿಕ ಭೇದಗಳ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಅವರು ಪರಿವರ್ತನೆಯ ಮೂಲ ತತ್ವ0ವೆಂದು ಕಂಡರು. ಕಾನೂನು, ಶಿಕ್ಷಣ ಮತ್ತು ಧಾರ್ಮಿಕ ಮೌಲ್ಯಗಳ ಸಮನ್ವಯದ ಮೂಲಕ ಈ ತತ್ವಗಳನ್ನು ಅನ್ವಯಿಸಿದವರು.

ಅಂಬೇಡ್ಕರ್ ಅವರ ಪರಿವರ್ತನೆಯ ದೃಷ್ಟಿಕೋನದಲ್ಲಿ ಕಾನೂನು ಮತ್ತು ಸಂವಿಧಾನವು ಪ್ರಮುಖ ಸಾಧನಗಳಾಗಿವೆ. ಆದ್ದರಿಂದಲೇ ಅವರು ಬರೀ ಸೈದ್ಧಾಂತಿಕ ತತ್ವಗಳನ್ನು ಮಾತ್ರ ರೂಪಿಸಿದವರಲ್ಲ, ಅದರ ಬದಲಾಗಿ ಕಾನೂನುಮಟ್ಟದಲ್ಲಿ ಶೋಷಿತ ವರ್ಗಗಳ ಹಕ್ಕುಗಳನ್ನು ರಕ್ಷಿಸುವ,

ಸಮಾನತೆ ಮತ್ತು ನ್ಯಾಯ ಸ್ಥಾಪಿಸುವ ತಂತ್ರಗಳನ್ನು ವಾಸ್ತವವಾಗಿ ರೂಪಿಸಿದರು. ಭಾರತ ಸಂವಿಧಾನ ರಚನಾ ಸಭಾ ಸದಸ್ಯರಾಗಿ ಮತ್ತು ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಅವರು ಶೋಷಿತ ವರ್ಗಗಳ ಉನ್ನತೀಕರಣ ಮತ್ತು ಸಮಾನತೆಯಿಗಾಗಿ ತಾತ್ವಿಕ ಹಾಗೂ ಪ್ರಾಯೋಗಿಕ ನಿಯಮಗಳನ್ನು ಸಂವಿಧಾನದಲ್ಲಿ ಸೇರಿಸಿದರು.

ಸಂವಿಧಾನವು ಸಮಾಜದಲ್ಲಿ ಅಸಮಾನತೆ ನಿವಾರಣೆಗಾಗಿ, ಕಾನೂನಾತ್ಮಕ ಮಾರ್ಗವನ್ನು ನೀಡುವಂತೆ ರೂಪುಗೊಂಡಿತು. ಅದರಲ್ಲಿನ ಪ್ರಮುಖ ಅನುಚ್ಛೇದಗಳೆಂದರೆ; ಅನುಚ್ಛೇದ–15ರಲ್ಲಿ ಜಾತಿ, ಧರ್ಮ, ಲಿಂಗ ಅಥವಾ ಸ್ಥಳೀಯ ಪೂರೈಕೆ ಆಧಾರದ ಮೇಲೆ ಭೇದಭಾವವನ್ನು ನಿಷೇಧ, ಸಮಾನ ಹಕ್ಕುಗಳ ಸ್ಥಾಪನೆ, ಅಸ್ಪೃಶ್ಯತೆಯನ್ನು ಕಡಿಮೆ ಮಾಡುವುದು. ಅನುಚ್ಛೇದ–17ರಲ್ಲಿ ಅಸ್ಪೃಶ್ಯತೆಯನ್ನು ಕಾನೂನಾತ್ಮಕವಾಗಿ ನಿಷೇಧ ಶೋಷಿತ ವರ್ಗಗಳ ಮಾನವೀಯತೆ ರಕ್ಷಣೆ, ಸಮಾಜದಲ್ಲಿ ಜಾತಿ, ಅಸ್ಪೃಶ್ಯತೆಯ ಅವಮಾನ ನಿವಾರಣೆ, ಅನುಚ್ಛೇದ–46ರಲ್ಲಿ ಶೋಷಿತ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲು ವ್ಯವಸ್ಥೆ, ಬಡವರ ಉನ್ನತೀಕರಣ, ಸಮಾನ ಅವಕಾಶ ಸೃಷ್ಟಿ, ಸಬಲೀಕರಣವನ್ನು ಮಾಡುವುದುದಾಗಿರುತ್ತದೆ.

ಅಂಬೇಡ್ಕರ್ ಅವರು ಕಾನೂನನ್ನು ಸಾಮಾಜಿಕ ಪರಿವರ್ತನೆಯ ಒಂದು ಕಾರ್ಯಮಾಧ್ಯಮವೆಂದು ಪರಿಗಣಿಸಿದ್ದರು. ಕಾನೂನು ಮತ್ತು ಸಂವಿಧಾನದ ವ್ಯವಸ್ಥೆಗಳ ಮೂಲಕ ಶೋಷಿತ ವರ್ಗಗಳು ತಮ್ಮ ಹಕ್ಕುಗಳನ್ನು ಪಡೆಯಲು ಮತ್ತು ಸಮಾನತೆಯಲ್ಲಿನ ಭಾಗವಹಿಸುವಿಕೆಯನ್ನು ಸಾಧಿಸಲು ಸಾಧ್ಯವಾಗಿದೆ. ಶಾಲೆ–ಕಾಲೇಜುಗಳಲ್ಲಿ ಮೀಸಲು ಸ್ಥಾನಗಳು, ಉದ್ಯೋಗದ ಹಕ್ಕುಗಳ ಖಾತರಿ, ಅಸ್ಪೃಶ್ಯತೆಯನ್ನು ತಡೆಯುವ ಕಾನೂನು ಕ್ರಮಗಳಾಗಿವೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಕಾನೂನು ಮತ್ತು ಸಂವಿಧಾನವು ಸಾಮಾಜಿಕ ಪರಿವರ್ತನೆಯ ಶಕ್ತಿಶಾಲಿ ಸಾಧನಗಳು. ಅವರು ಕೇವಲ ಕಾನೂನು ರೂಪಿಸುವುದಲ್ಲ, ಅದನ್ನು ಶೋಷಿತ ವರ್ಗಗಳ ಉನ್ನತೀಕರಣ, ಜಾತ್ಯಾತೀತ ಸಮಾಜ ಸ್ಥಾಪನೆ ಮತ್ತು ಸಮಾನತೆಯ ಅನುಷ್ಠಾನಕ್ಕೆ ನೇರವಾಗಿ ಬಳಸಿದರು.

ಅಂಬೇಡ್ಕರ್ ಅವರ ಪರಿವರ್ತನೆಯ ದೃಷ್ಟಿಕೋನದಲ್ಲಿ ಧಾರ್ಮಿಕ ಪರಿವರ್ತನೆಯು ಒಂದು ಪ್ರಮುಖ ತಂತ್ರವಾಗಿತ್ತು ಎಂಬುದನ್ನು ತಿಳಿದಿದ್ದರು. ಇದು ಕೇವಲ ಕಾನೂನು ಅಥವಾ ಶೈಕ್ಷಣಿಕ ಕ್ರಮಗಳಿಂದ ಸಾಮಾಜಿಕ ಅಸಮಾನತೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲಾಗುವುದಿಲ್ಲ. ಧಾರ್ಮಿಕ ಮೌಲ್ಯಗಳು ಮತ್ತು ಧಾರ್ಮಿಕ ಗುರುತು ಕೂಡ ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನದ ಮೇಲೆ ಪ್ರಭಾವ ಬೀರುತ್ತವೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಪರಿವರ್ತನೆಯ ಮೂಲಕ ಶೋಷಿತ ವರ್ಗಗಳಿಗೆ ಉನ್ನತ ಸ್ಥಾನ ಮತ್ತು ಮಾನವೀಯತೆ ನೀಡುವ ಸಾಧನವನ್ನು ಅಂಬೇಡ್ಕರ್ ಅವರು ರೂಪಿಸಿದರು. 14ನೆಯ ಅಕ್ಟೋಬರ್ 1956ರಲ್ಲಿ ಬೌದ್ಧಧಮ್ಮವನ್ನು ಸ್ವೀಕಾರದ ಅಂಬೇಡ್ಕರ್ ಅವರೊಂದಿಗೆ

ಬಹುಮಾನ್ಯವಾದ 500,000 ಶೋಷಿತ ವರ್ಗದರೂ ಕೂಡ ಇದೇ ಬೌದ್ಧಧಮ್ಮವನ್ನು ಅಂದೇ ಸ್ವೀಕರಿಸಿದರು. ಈ ಪರಿವರ್ತನೆಯೂ ಸಾಮಾಜಿಕ ಗುರುತು, ಗೌರವ ಮತ್ತು ಮಾನವೀಯತೆಯನ್ನು ನೀಡುವ ಸಂಕೇತವಾಗಿತ್ತು. ಇದು ಶೋಷಿತ ವರ್ಗಗಳಿಗೆ ಸ್ವಾಭಿಮಾನ, ಹೊಸ ಸಾಮಾಜಿಕ ಸ್ಥಾನ ಮತ್ತು ನೈತಿಕ ದೃಢತೆ ಒದಗಿಸಿತು. ಧಾರ್ಮಿಕ ಪರಿವರ್ತನೆಯ ಪ್ರಾಯೋಗಿಕ ಮಹತ್ವ ಧಾರ್ಮಿಕ ಪರಿವರ್ತನೆಯ ಮೂಲಕ ಅಂಬೇಡ್ಕರ್ ಅವರು ಶೋಷಿತ ವರ್ಗಗಳಿಗೆ ಸಾಮಾಜಿಕ ಹೋರಾಟದ ಪ್ರಬಲ ಸಾಧನವನ್ನು ನೀಡಿದರು. ಬೌದ್ಧಧಮ್ಮದಲ್ಲಿ ಸಮಾನತೆ, ನ್ಯಾಯ, ಅಹಿಂಸೆ ಮತ್ತು ಮಾನವೀಯ ಮೌಲ್ಯಗಳು ಮುಖ್ಯವಾಗಿವೆ. ಇದರಿಂದ ಶೋಷಿತರು ಧಾರ್ಮಿಕ ಹಿಂಸೆ ಅಥವಾ ಜಾತಿ–ಧರ್ಮ ಆಧಾರಿತ ವರ್ಗಭೇದದಿಂದ ಬಿಡುಗಡೆಯಾದರು.

ಶೋಷಿತ ವರ್ಗಗಳಿಗೆ ಹೊಸ ಗುರುತು, ಸಮಾನತೆ ಮತ್ತು ಶ್ರೇಷ್ಠತೆಯು ಸಮಾಜದಲ್ಲಿ ಅಸ್ಪೃಶ್ಯತೆ ಮತ್ತು ಜಾತಿ–ಧರ್ಮ ಆಧಾರಿತ ಹಿಂಸೆ ಕಡಿಮೆಯಾಗುತ್ತದೆ. ಈ ಬೌದ್ಧಧಮ್ಮದ ಸ್ವೀಕಾರವು ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಪರಿವರ್ತನೆಯ ಸಂಕೇತವಾಗಿದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಧಾರ್ಮಿಕ ಪರಿವರ್ತನೆ ಸಾಮಾಜಿಕ ಪರಿವರ್ತನೆಯ ಸಮಗ್ರ ತಂತ್ರವಾಗಿದೆ. ಕಾನೂನು ಮತ್ತು ಶಿಕ್ಷಣದ ಜೊತೆಗೆ, ಶೋಷಿತ ವರ್ಗಗಳ ಉನ್ನತೀಕರಣ ಮತ್ತು ಸಮಾನತೆ ಸಾಧನಕ್ಕೆ ಧಾರ್ಮಿಕ ಮಾರ್ಗವನ್ನು ಬಳಸಿದ ಉದಾಹರಣೆಯಾಗಿದೆ. ಬೌದ್ಧಧಮ್ಮದ ಸ್ವೀಕಾರವು ಮಾನವೀಯತೆ, ಸಮಾನತೆ ಮತ್ತು ನ್ಯಾಯ ಪ್ರತಿಪಾದನೆಯ ಪ್ರಬಲ ಸಂಕೇತವಾಗಿದೆ.

ಅಂಬೇಡ್ಕರ್ ಅವರ ಸಾಮಾಜಿಕ ಪರಿವರ್ತನೆಯ ದೃಷ್ಟಿಕೋನದಲ್ಲಿ ಶಿಕ್ಷಣವು ಕೂಡ ಪ್ರಮುಖ ಸಾಧನವಾಗಿರುತ್ತದೆ. ಅವರು ಬಡವರು, ಅಸ್ಪೃಶ್ಯರು ಮತ್ತು ಮಹಿಳೆಯರಿಗೆ ಶಿಕ್ಷಣ ಒದಗಿಸುವುದನ್ನು ಸಾಮಾಜಿಕ ಹಕ್ಕು ಮತ್ತು ಪರಿವರ್ತನೆಯ ಪ್ರಮುಖ ವಿಧಾನವೆಂದು ಪರಿಗಣಿಸಿದರು. ಶಿಕ್ಷಣವು ಕೇವಲ ಪಾಠ್ಯ ವಿಷಯ ಕಲಿಸುವುದಲ್ಲ, ಜ್ಞಾನ, ಅರಿವು ಮತ್ತು ಸಮಾನತೆಯನ್ನು ಹರಡುವ ಪ್ರಬಲ ಸಾಧನವಾಗಿದೆ. ಶಿಕ್ಷಣದ ಮೂಲಕ ಜನರಲ್ಲಿ ಸ್ವಾಭಿಮಾನ, ಸಬಲೀಕರಣ ಮತ್ತು ಸಾಮಾಜಿಕ ಜಾಗೃತಿಯೂ ಮೂಡುತ್ತದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶೋಷಿತ ವರ್ಗಗಳು ತಮ್ಮ ಹಕ್ಕುಗಳನ್ನು ತಿಳಿದುಕೊಂಡು ಸಮಾಜದಲ್ಲಿ ಭಾಗವಹಿಸಲು ಶಿಕ್ಷಣ ಅನಿವಾರ್ಯವಾಗಿರುತ್ತದೆ. ಶಾಲೆ–ಕಾಲೇಜು ಸ್ಥಾಪನೆಯ ಮೂಲಕ ಶೋಷಿತ ವರ್ಗ, ಅಸ್ಪೃಶ್ಯರು ಮತ್ತು ಬಾಲಕಿಯರಿಗೆ ಶಿಕ್ಷಣದ ಅವಕಾಶವನ್ನು ವಿಸ್ತರಿಸುವುದಾಗಿತ್ತು. ಪುಣೆ, ಮಹಾಡ್ ಮತ್ತು ಇತರೆ ಪ್ರದೇಶಗಳಲ್ಲಿ ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಿದರು. ವಿದ್ಯಾರ್ಥಿಗಳಲ್ಲಿ ನ್ಯಾಯ, ಸಮಾನತೆ, ಹಕ್ಕುಗಳ ಅರಿವು ಮೂಡಿಸುವ ಉಪನ್ಯಾಸಗಳು, ಪತ್ರಿಕೆ, ಪತ್ರಿಕೆ ಲೇಖನಗಳು, ಜಾಗೃತಿ ಕಾರ್ಯಕ್ರಮಗಳ

ಮೂಲಕ ಬಡವರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವುದು. ಶಿಕ್ಷಣದ ಜೊತೆಗೆ ಮಾನವೀಯತೆ, ಅಹಿಂಸೆ ಮತ್ತು ಸಮಾನತೆಯ ಮೌಲ್ಯಗಳ ಬೋಧನೆಯನ್ನು ಮಾಡುವುದಾಗಿತ್ತು. ಶೋಷಿತ ವರ್ಗದವರ ಉನ್ನತೀಕರಣ ಮತ್ತು ಸಮಾನತೆಯ ಮಾರ್ಗದಲ್ಲಿ ಶಿಕ್ಷಣವನ್ನು ನೇರವಾಗಿ ಬಳಸಿದ ಕ್ರಮವಾಗಿದೆ. ಸಮಾಜದ ಮೇಲೆ ಪರಿಣಾಮಗಳು ಶೋಷಿತ ವರ್ಗಗಳು ಸ್ವಾಭಿಮಾನ, ಜಾಗೃತಿ ಮತ್ತು ಭಾಗವಹಿಸುವಿಕೆಯಲ್ಲಿ ಶಕ್ತಿ ಪಡೆದರು. ಶಿಕ್ಷಣವು ಕೇವಲ ಜ್ಞಾನ ನೀಡರುತ್ತದೆ. ಸಾಮಾಜಿಕ ಹಕ್ಕುಗಳ ಅರಿವು ಮತ್ತು ಸಮಾನತೆ ಸಾಧನೆಗೆ ಕೀಲಾಗಿದೆ. ಜನರ ದೀರ್ಘಕಾಲೀನ ಉನ್ನತೀಕರಣ ಮತ್ತು ಸಮಾನತೆಯ ಸ್ಥಾಪನೆಯಲ್ಲಿ ಶಕ್ತಿಶಾಲಿ ಸಾಧನವಾಗಿದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಪ್ರಮುಖ ಅಂಶವಾಗಿದೆ. ಜ್ಞಾನ ಮತ್ತು ಸಮಾನತೆಯನ್ನು ಹರಡುವ ಸಾಧನವಾಗಿಯೇ ಶೋಷಿತ ವರ್ಗಗಳ ಉನ್ನತೀಕರಣ, ಸ್ವಾಭಿಮಾನ ಮತ್ತು ಜಾಗೃತಿಗೆ ಮಾರ್ಗದರ್ಶಕವಾಗಿದೆ.

ಸಾಮಾಜಿಕ ಚಟುವಟಿಕೆಗಳು ಸಮಾಜ ಪರಿವರ್ತನೆಯ ಮುಖ್ಯ ಸಾಧನವಾಗಿವೆ. ಆದ್ದರಿಂದಲೇ ಅಂಬೇಡ್ಕರ್ ಅವರು ಕೇವಲ ಕಾನೂನು, ಧರ್ಮ ಅಥವಾ ಶಿಕ್ಷಣಮಟ್ಟದಲ್ಲಿ ಮಾತ್ರ ಕಾರ್ಯನಿರ್ವಹಿಸಲಿಲ್ಲ, ಸಕ್ರಿಯವಾಗಿ ಸಾಮಾಜಿಕ ಆಯಾಮಗಳಲ್ಲಿಯೂ ಭಾಗವಹಿಸಿ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಪರಿವರ್ತನೆ ತರುತ್ತಿದ್ದರು. ಅಂಬೇಡ್ಕರ್ ಅವರು ಶೋಷಿತ ವರ್ಗಗಳ ಉನ್ನತೀಕರಣ ಮತ್ತು ಸಮಾಜದಲ್ಲಿ ಸಮಾನತೆ ಸ್ಥಾಪನೆಗಾಗಿಯೇ ಸಮಾಜ ಸಂಘಟನೆಗಳು ಮತ್ತು ಸಮಿತಿಗಳನ್ನು ರೂಪಿಸಿದರು. ಬಡವರ ಹಕ್ಕುಗಳ ರಕ್ಷಣೆ, ಶಿಕ್ಷಣದ ಪ್ರಚಾರ, ಉದ್ಯೋಗ ಮೀಸಲು ಹಕ್ಕುಗಳ ಪರಿಪಾಲನೆ, ಸಂಘಟನೆಗಳು ಶೋಷಿತ ವರ್ಗಗಳಿಗೆ ಸಬಲೀಕರಣ ಮತ್ತು ಸ್ವಾಭಿಮಾನವನ್ನು ನೀಡುವ ಮೂಲಕ ಸಮಾಜದಲ್ಲಿ ನೇರ ಪರಿಣಾಮ ಉಂಟುಮಾಡಿದವು. ಅಂಬೇಡ್ಕರ್ ಅವರು ನೇರವಾಗಿ ಜನರಿಗೆ ಉಪನ್ಯಾಸಗಳನ್ನು ನೀಡುವುದರ ಮೂಲಕ ನೈತಿಕ ಮತ್ತು ಧಾರ್ಮಿಕ ಮೌಲ್ಯಗಳು, ಸಮಾನತೆ, ನ್ಯಾಯ, ಅಹಿಂಸೆಯ ಬಗೆಗೆ ಹೆಚ್ಚಿನ ಅರಿವು ಮೂಡಿಸಿದರು. ಮಹಾಡ್ ಮತ್ತು ಇತರೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳು, ಸಂವಾದಗಳು ಮತ್ತು ಚರ್ಚೆಗಳು ಜನರಲ್ಲಿ ಶೋಷಿತ ಹಕ್ಕುಗಳ ಅರಿವು ಹೆಚ್ಚಿಸಲು ಉಪಯುಕ್ತವಾಗಿವೆ. ಅಂಬೇಡ್ಕರ್ ಅವರು ಪತ್ರಿಕೆಗಳು ಮತ್ತು ಲೇಖನಗಳನ್ನು ಬಳಸಿ ಸಾರ್ವಜನಿಕ ಜಾಗೃತಿಯನ್ನು ಹರಡಿದರು. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಜಾತಿ–ಧರ್ಮ ಭೇದ ಮತ್ತು ಶೋಷಿತ ವರ್ಗಗಳ ಉನ್ನತೀಕರಣವನ್ನು ಕುರಿತು ಜನರಿಗೆ ತಿಳಿಸುವ ಪ್ರಬಲ ಮಾಧ್ಯಮವಾಗಿದೆ. ಪತ್ರಿಕೆಗಳು ಸಾಮಾಜಿಕ ಚಟುವಟಿಕೆಗಳ ವಿಸ್ತರಣೆಗೆ ಸಹಾಯ ಮಾಡಿದ್ದು, ಜನಸಾಮಾನ್ಯರಲ್ಲಿ ಚಿಂತನಶೀಲತೆ ಮತ್ತು ಸ್ವಾಭಿಮಾನ ಉಂಟುಮಾಡಿದವು. ಜನರಲ್ಲಿ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಅರಿವು ಹೆಚ್ಚಿತು. ಶೋಷಿತ ವರ್ಗಗಳ ಉನ್ನತೀಕರಣವು ಸಮಾಜದಲ್ಲಿ ಸಮಾನ ಹಕ್ಕುಗಳ

ಜಾಗೃತಿ ಮತ್ತು ಸ್ವಾಭಿಮಾನ ಸಾಧನೆಯಾಗಿದೆ. ಸಾಮಾಜಿಕ ಚಟುವಟಿಕೆಗಳು ಪರಿವರ್ತನೆಯ ಪ್ರಬಲ ಸಾಧನವಾಗಿದೆ ಎಂದು ಪರಿಣಮಿಸಿದವು.

ಅಂಬೇಡ್ಕರ್ ಅವರ ಸಮಾಜ ಪರಿವರ್ತನೆಯ ದೃಷ್ಟಿಕೋನದಲ್ಲಿ ಕೆಲವು ಮೂಲ ತತ್ವಗಳು ಕೇಂದ್ರಭೂತವಾದವು. ಈ ತತ್ವಗಳು ಕಾನೂನು, ಶಿಕ್ಷಣ ಮತ್ತು ಧಾರ್ಮಿಕ ಮಾರ್ಗಗಳ ಜೊತೆಗೆ, ಶೋಷಿತ ವರ್ಗಗಳ ಉನ್ನತೀಕರಣ ಮತ್ತು ಸಮಾನತೆಯ ಸ್ಥಾಪನೆಗೆ ಮಾರ್ಗದರ್ಶನವನ್ನು ಕೂಡ ನೀಡಿದವು. ಅಂದರೆ, ಪ್ರತಿಯೊಬ್ಬ ವ್ಯಕ್ತಿಗೂ ಜಾತಿ, ಧರ್ಮ, ಲಿಂಗ, ಆರ್ಥಿಕ ಸ್ಥಿತಿಯಂತಹ ಭೇದವಿಲ್ಲದೆ ಸಮಾನ ಹಕ್ಕುಗಳ ಒದಗಣೆಯಾಗಿದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಮಾನತೆ ಅಸ್ಪೃಶ್ಯತೆಯ, ಜಾತಿ–ಧರ್ಮ ಭೇದ ಮತ್ತು ಶೋಷಣೆಯ ವಿರುದ್ಧ ನೇರ ಹೋರಾಟವಾಗಿತ್ತು. ಇದು ಜಾತ್ಯಾತೀತ ಸಮಾಜದ ಆದರ್ಶವನ್ನು ರೂಪಿಸಿರುತ್ತದೆ. ಶೋಷಿತ ವರ್ಗಗಳು ತಮ್ಮ ಹಕ್ಕುಗಳನ್ನು ಕಾನೂನು ಮಟ್ಟದಲ್ಲಿ ಪಡೆಯಲು ವ್ಯವಸ್ಥೆಯಾಗಿದೆ. ಸಮಾನ ಹಕ್ಕುಗಳ ರಕ್ಷಣೆ, ಶೋಷಣೆಯ ವಿರುದ್ಧ ನಿಲುವು, ನ್ಯಾಯೋಚಿತ ಸಮಾಜ ನಿರ್ಮಾಣವಾಗಿದೆ. ಹಿಂಸೆ, ಅನ್ಯಾಯ, ದುರುಪಯೋಗವನ್ನು ತೊರೆದು ಶಾಂತ, ನ್ಯಾಯೋಚಿತ ಮಾರ್ಗದಲ್ಲಿ ಬದಲಾವಣೆ ಸಾಧಿಸುವುದು. ಶಾಂತಪರ ವಿಧಾನದಲ್ಲಿ ಸಾಮಾಜಿಕ ಬದಲಾವಣೆ, ಸಂಘರ್ಷವನ್ನು ಕಡಿಮೆ ಮಾಡುವುದು. ಪ್ರತಿಯೊಬ್ಬ ವ್ಯಕ್ತಿಗೆ ಬುದ್ಧಿವಂತಿಕೆಯ ಹಕ್ಕು; ಜ್ಞಾನ ಮತ್ತು ಜಾಗೃತಿ ನೀಡುವ ಪ್ರಕ್ರಿಯೆಯಾಗಿದೆ. ಶೋಷಿತ ವರ್ಗಗಳ ಉನ್ನತೀಕರಣ, ಸ್ವಾಭಿಮಾನ, ಜಾಗೃತಿ, ಸಮುದಾಯದಲ್ಲಿ ಸಕ್ರಿಯ ಭಾಗವಹಿಸುವಿಕೆಯಾಗಿದೆ. ಬೌದ್ಧಧಮ್ಮದ ಸ್ವೀಕಾರವೂ ಹಳೆಯ ಧಾರ್ಮಿಕ ಹಿಂಸೆ ಮತ್ತು ಜಾತಿ–ಧರ್ಮ ಆಧಾರಿತ ವ್ಯತ್ಯಾಸವನ್ನು ತೊರೆದು ಸಮಾನತೆಯ ಮಾರ್ಗವಾಗಿದೆ. ದೇಶದಲ್ಲಿನ ಸಮಸ್ತ ಶೋಷಿತ ವರ್ಗಗಳ ಉನ್ನತೀಕರಣ ಸಾಮಾಜಿಕ ಗುರುತು, ಮಾನವೀಯತೆ, ನ್ಯಾಯ ಬಲವರ್ಧನೆಯಾಗಿರುತ್ತದೆ.

ಅಂಬೇಡ್ಕರ್ ಅವರು ಪರಿವರ್ತನೆಯ ತತ್ವಗಳು ಸಮಾನತೆ, ನ್ಯಾಯ, ಅಹಿಂಸೆ, ಶಿಕ್ಷಣ ಮತ್ತು ಧಾರ್ಮಿಕ ಪರಿವರ್ತನೆ ಎಂಬ ನೈತಿಕ ಮತ್ತು ಸಾಮಾಜಿಕ ತಳಹದಿಯನ್ನು ರೂಪಿಸುತ್ತವೆ. ಈ ತತ್ವಗಳು ಕಾನೂನು, ಶಿಕ್ಷಣ, ಧಾರ್ಮಿಕ ಮಾರ್ಗಗಳ ಸಮನ್ವಯದ ಮೂಲಕ ಸಮಾಜದಲ್ಲಿ ಶೋಷಿತ ವರ್ಗದವರ ಉನ್ನತೀಕರಣ ಮತ್ತು ಸಮಾನತೆಯ ಸ್ಥಾಪನೆಗೆ ಪ್ರಬಲ ಸಾಧನವೆಂದು ಪರಿಣಮಿಸುತ್ತವೆ. ಅವರು ಕೇವಲ ಕಾನೂನು ಅಥವಾ ಧರ್ಮ ಅಥವಾ ಶಿಕ್ಷಣ ಕ್ಷೇತ್ರದಲ್ಲಿಯೇ ನಿರ್ವಹಿಸಿದವರು ಅಲ್ಲ, ಬದಲಾಗಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಕಾನೂನುಮಟ್ಟದ ಪರಿವರ್ತನೆಯ ಸಮಗ್ರ ತಂತ್ರವನ್ನು ರೂಪಿಸಿದರು. ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಪ್ರತಿಪಾದನೆ, ಸಾಮಾಜಿಕ ಗುರುತು ನೀಡುವ ಸಾಧನ, ಶಾಲಾ–ಕಾಲೇಜುಗಳ ಸ್ಥಾಪನೆ, ಶಿಕ್ಷಣದ ಪ್ರಚಾರ, ಜಾಗೃತಿ ಮೂಡಿಸುವ ಉಪನ್ಯಾಸಗಳು, ಭಾರತ ಸಂವಿಧಾನದಲ್ಲಿನ ಅನುಚ್ಛೇದ–15, 17, 46 ಹಾಗೂ ಮೀಸಲು ವ್ಯವಸ್ಥೆಗಳನ್ನು ರೂಪಿಸುವುದು.

ಸ್ವಾಭಿಮಾನ, ಜಾಗೃತಿ ಮತ್ತು ಸಮಾಜದಲ್ಲಿ ಸಮಾನ ಹಕ್ಕುಗಳ ಸ್ಥಾಪನೆ, ಜಾತಿ–ಧರ್ಮ ಸಂಬಂಧಿ ಅಸಮಾನತೆ ನಿವಾರಣೆ, ಅಸ್ಪೃಶ್ಯತೆಯ ಕಾನೂನು ಮತ್ತು ಧಾರ್ಮಿಕ ಹೋರಾಟಗಳ ಮೂಲಕ ಸಾಧನೆ. ಶಿಕ್ಷಣ, ಧಾರ್ಮಿಕ ಬೋಧನೆ ಮತ್ತು ಸಮಾನತೆಯ ಅರಿವು ಮೂಲಕ ವ್ಯಕ್ತಿಯ ಸ್ವಾಭಿಮಾನ ಮತ್ತು ಜ್ಞಾನ ವೃದ್ಧಿಯೂ ಸಾಮೂಹಿಕ ಪರಿವರ್ತನೆಯಾಗಿದೆ. ಅಂಬೇಡ್ಕರ್ ಪರಿವರ್ತನೆಯ ತತ್ವಗಳು ಇಂದಿಗೂ ಭಾರತೀಯ ಸಮಾಜದಲ್ಲಿ ಮೌಲ್ಯಾಧಾರಿತ ಜಾಗೃತಿ, ಸಾಮಾಜಿಕ ಬದಲಾವಣೆ ಮತ್ತು ಸಮಗ್ರ ಉನ್ನತೀಕರಣಕ್ಕೆ ಮಾರ್ಗದರ್ಶನ ನೀಡುತ್ತವೆ. ಅಂಬೇಡ್ಕರ್ ಅವರು ಜನರಲ್ಲಿ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಅರಿವು ಮೂಡಿಸುವ ಸಾಧನಯಾಗಿದೆ. ಈ ಸಮಗ್ರ ತಂತ್ರಗಳ ಮೂಲಕ ಅಂಬೇಡ್ಕರ್ ಅವರು ಸಮಾಜವನ್ನು ನ್ಯಾಯೋಚಿತ, ಸಮಾನತೆಪೂರ್ಣ ಮತ್ತು ಪ್ರಗತಿಪರವಾಗಿ ರೂಪಿಸಲು ಪ್ರಯತ್ನಿಸಿದರು. ಅವರ ಚಟುವಟಿಕೆಗಳು ಮತ್ತು ತತ್ವಗಳು ಇಂದಿಗೂ ಭಾರತೀಯ ಸಮಾಜದಲ್ಲಿ ಶೋಷಿತ ವರ್ಗದವರ ಉನ್ನತೀಕರಣ, ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಪರಿಪಾಟವನ್ನು ರೂಪಿಸಲು ಮಾದರಿಯಾಗಿವೆ.

**ಪರಾಮರ್ಶನ ಗ್ರಂಥಗಳು**


1. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು,** ಸಂಪುಟ–03 ಮತ್ತು 10, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಕುವೆಂಪು ಭಾಷಾ ಭಾರತಿ, ಬೆಂಗಳೂರು, 2015
2. ಡಾ.ಮೂಡ್ನಾಕೂಡು ಚಿನ್ನಸ್ವಾಮಿ, (ಪ್ರ.ಸಂ), ಡಾ.ಜೆ.ಸೋಮಶೇಖರ್, (ವ್ಯ.ಸಂ), **ಮರಳಿ ಮನೆಗೆ,** ಡಾ.ಬಾಬಾಸಾಹೇಬ್ ಅಂಬೇಡ್ಕರ್ ಧಮ್ಮ ದೀಕ್ಷಾ ಸುವರ್ಣ ವರ್ಷಆಚರಣೆ ಸಮಿತಿ, ಮೈಸೂರು, 2006.
3. ಡಾ.ಎಂ.ರಾಚಪ್ಪಾಜಿ, **ಪ್ರಜ್ಞಾ,** ಉನ್ನತಿ ಪ್ರಕಾಶನ, ಮೈಸೂರು, 2019
4. ದತ್ತಾತ್ರೇಯ ಇಕ್ಕಳಿಕಿ (ಸಂ), **ಅಂಬೇಡ್ಕರ್ ಚಿಂತನೆಗಳು**, ಸುಮೇಧ ಪ್ರಕಾಶ, ಗುಲಾಬರ್ಗಾ, 2005
5. ಪುನ್ನೆಪ್ಪ ಎಸ್. ಮಾಳ್ಗೆ, **ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಯಲ್ಲಿ ಸಾಮಾಜಿಕ ನ್ಯಾಯ,** ರಾಜ್ ಪ್ರಕಾಶನ, ಮೈಸೂರು, 2005